MR. SPEAKER : He will do it. You please go and meet the Hon'ble Revenue Minister.

ಜಗಳೂರು ಕ್ಷೇತ್ರದಲ್ಲಿನ ಪಿಯುಸಿ ಕಾಲೇಜನ್ನು ಬೇರೆ ಕಡೆಗೆ ವರ್ಗಾಯಿಸುವುದು

ಶ್ರೀ ಎಂ. ಬಸಪ್ಪ (ಜಗಳೂರು) : ಸನ್ಮಾನ್ಯ ಅಧ್ಯಕ್ಷರೆ ನನ್ನ ಕ್ಷೇತ್ರಕ್ಕೆ ಸೇರಿರುವ ಬಿಳ್ಚೋಡು ಹೋಬಳಿ ಕೇಂದ್ರ ಮೇಲಾಗಿ 10 ಸಾವಿರ ಜನಸಂಖ್ಯೆ ಇರುವ ಒಂದು ದೊಡ್ಡ ಗ್ರಾಮ ಅಲ್ಲಿ ಒಂದು ಪಿಯುಸಿ ಕಾಲೇಜು ಸುಮಾರು 1984ರಲ್ಲಿ ಆರಂಭವಾಯಿತು, ಇಲ್ಲಿಯ ವರೆಗೆ ನಡೆಯುತ್ತಿದೆ. ಈಗ ಆ ಒಂದು ಪಿಯುಸಿ ಕಾಲೇಜನ್ನು ಹಾಜರಾತಿಯಿಲ್ಲವೆನ್ನುವ ಒಂದು ಕಾರಣದಿಂದ ಬೇರೆಕಡೆಗೆ ವರ್ಗಾಯಿಸಬೇಕೆನ್ನುವ ಒಂದು ಸಂಧಾನ ನಡೆಯುತ್ತಿದೆ, ಅದನ್ನು ಅಲ್ಲೇ ಮುಂದುವರೆಸಿಕೊಂಡು ಹೋಗಬೇಕು. ಈ ವರ್ಷದಿಂದ ಏನು ಹಾಜರಾತಿ ಕಮ್ಮಿಯಾಗಿದೆ, ಅದನ್ನು ಆದಷ್ಟು ಜಾಸ್ತಿ ಮಾಡಿಕೊಳ್ಳುವುದಕ್ಕೆ ನಾವೆಲ್ಲರೂ ಪ್ರಯತ್ನ ಮಾಡುತ್ತೇವೆನ್ನುವ ಮಾತನ್ನು ಹೇಳುತ್ತಿದ್ದೇನೆ.

ಶ್ರೀ ಹೆಚ್.ಜಿ. ಗೋವಿಂದೇಗೌಡ (ಪ್ರಾಥಮಿಕ ಹಾಗೂ ಉನ್ನತ ಶಿಕ್ಷಣ ಸಚಿವರು) : ಮಾನ್ಯ ಸಭಾಧ್ಯಕ್ಷರೆ, ಜಗಳೂರು ಕ್ಷೇತ್ರದ ಬಿಳ್ಚೋಡಿನಲ್ಲಿ ಒಂದು ಸರ್ಕಾರಿ ಪದವಿಪೂರ್ವ ಕಾಲೇಜಿದ್ದು ಅಲ್ಲಿ ವಿದ್ಯಾರ್ಥಿಗಳ ಸಂಖ್ಯೆ ತುಂಬಾ ಕಡಿಮೆಯಾಗಿರುವುದರಿಂದ ಅದನ್ನು ಸ್ಥಳಾಂತರಿಸುವುದು ಅನಿವಾರ್ಯವಾಗಿದೆ. ಹೀಗೆ ಸ್ಥಳಾಂತರಿಸುವಾಗ ಜಗಳೂರು ಕ್ಷೇತ್ರದೊಳಗೆ ಅಗತ್ಯವಾದ ಜಾಗಕ್ಕೆ ಸ್ಥಳಾಂತರಿಸಲು ಅವಕಾಶವನ್ನು ಸರ್ಕಾರದಿಂದ ಕಲ್ಪಿಸಿಕೊಡಲಾಗುವುದು. ಬೇಕಾಗಿರುವ ಅವಶ್ಯಕತೆಗಳನ್ನು ಒದಗಿಸಿಕೊಡುವುದಕ್ಕೆ ತಾವು ಸಿದ್ಧರಾಗಬೇಕು. ಇದೇನಾಗಿದೆ ಎಂದರೆ ಬಹಳ ಕಡೆ ನಾಲ್ಕು ಜನ ಉಪನ್ಯಾಸಕರಿರುತ್ತಾರೆ ಹತ್ತು, ಹದಿನೈದು ಜನ ವಿದ್ಯಾರ್ಥಿಗಳಿರುತ್ತಾರೆ, ಇದು ದೇಶದ ದೃಷ್ಟಿಯಿಂದ ಒಳ್ಳೆಯದಾಗುವುದಿಲ್ಲ. ನಿಮ್ಮದು ಮಾತ್ರವಲ್ಲ, ರಾಜ್ಯದಲ್ಲಿರುವ ಹಲವಾರು ಪಿಯುಸಿ ಕಾಲೇಜುಗಳಿರುವುದನ್ನು ಸ್ಥಳಾಂತರ ಮಾಡುವುದಕ್ಕೆ ನಾವು ಈಗಾಗಲೇ ಯೋಚನೆ ಮಾಡುತ್ತಿದ್ದೇವೆ.

ಅಧ್ಯಕ್ಷರು : ತಾವು ಗೋವಿಂದೇಗೌಡರೊಡನೆ ಚರ್ಚೆ ಮಾಡಿ.

ಶ್ರೀ ಪ್ರಕಾಶ್ ಬಿ. ಹುಕ್ಕೇರಿ : ಅಧ್ಯಕ್ಷರೆ, ಇದು ರಾಜ್ಯದ ಸಮಸ್ಯೆಯಾಗಿದೆ, ಮಕ್ಕಳಿದ್ದರೂ ಕೂಡ ಶಿಕ್ಷಕರನ್ನೇ ಕೊಟ್ಟಿಲ್ಲ.

ಅಧ್ಯಕ್ಷರು : ಹುಕ್ಕೇರಿಯವರೇ ನೀವು ಎರಡು ದಿವಸಗಳಿಂದ ಬಂದಿಲ್ಲ, ಈ ವಿಚಾರವನ್ನು ನಾವು ಚರ್ಚೆ ಮಾಡಿದ್ದೇವೆ. ಅಪ್ಪಚ್ಚುರಂಜನ್‌ರವರು ಬಂದಿಲ್ಲ, ಚಿಮ್ಮನ ಕಟ್ಟಿಯವರೆ ಮಾತನಾಡಿ.

ಗುಲ್ಬರ್ಗಾ ಜಿಲ್ಲೆಯಲ್ಲಿನ ಗೃಹರಕ್ಷಕ ದಳದ ಕಮಾಂಡೆಂಟ್ ಹೋಮಿ ಇರಾನಿರವರನ್ನು ಅಲ್ಲಿಯೇ ಮುಂದುವರಿಸುವ ಬಗ್ಗೆ

ಶ್ರೀ ಬಿ.ಬಿ. ಚಿಮ್ಮನಕಟ್ಟಿ (ಬಾದಾಮಿ) : ಅಧ್ಯಕ್ಷರೆ, ಈ ಗುಲ್ಬರ್ಗಾ ಜಿಲ್ಲೆಯಲ್ಲಿ ಗೃಹರಕ್ಷಕದಳದ ಮುಖ್ಯ ಕಮಾಂಡೆಂಟ್ ಆಗಿದ್ದ ಹೋಮಿ ಇರಾನಿಯವರನ್ನು ತೆಗೆದಿದ್ದೀರಿ. ಅವರನ್ನು ತೆಗೆದಿದ್ದರ ಬಗ್ಗೆ